## ನೀರಸ ಜಾನಕಿ

ಕಲರ್ಸ್ ಸೂಪರ್‌ನ 'ಮಗಳು ಜಾನಕಿ' ಈಗೀಗ ನೀರಸವೆನ್ನಿಸುತ್ತಿದೆ. ಧಾರಾವಾಹಿಯ ಕಥೆಯೂ ಸಂಬಂಧವಿಲ್ಲದ ತಿರುವುಗಳನ್ನು ಪಡೆಯುತ್ತಿದೆ. 'ಧಾತ್ರಿಯ ಕಿಡ್ನಾಪ್ ಆಗಿರುವ ನಾಟಕಕ್ಕೂ' ಧಾರಾವಾಹಿಯ ಕಥೆಗೂ ಇದಕ್ಕೂ ಏನು ಸಂಬಂಧ? ಇನ್ನು ನಿರಂಜನನ ಪಾತ್ರ ತುಂಬಾ ಸಪ್ಪೆ ಅನಿಸತೊಡಗಿದೆ.

ದೇವಕಿ ಕುಟುಂಬಕ್ಕೆ ಒಳ್ಳೆಯ ದಿನಗಳು ಬರುವುದಕ್ಕೆ ಇನ್ನು ಎಷ್ಟು ಕಾಲ ಕಾಯಬೇಕೋ? ಆರಂಭದಲ್ಲಿ ಭರವಸೆ ಹುಟ್ಟಿಸಿದ ಈ ಧಾರಾವಾಹಿ ಈಗ ನೀರಸವೆನ್ನಿಸುತ್ತದೆ. ಮುಂದಿನ ಸಂಚಿಕೆಗಳಲ್ಲಾದರೂ ವೀಕ್ಷಕರಿಗೆ ನಿರಾಸೆ ಆಗುವುದಿಲ್ಲವೆಂದು ನಿರೀಕ್ಷಿಸಬಹುದೇ?

—ಎಸ್. ರವೀಂದ್ರನಾಥ, ಬೆಂಗಳೂರು

## ಅರ್ಥವಾಗದ ಪಾತ್ರ?

ಮಾಡುತ್ತಿರುವುದು ಮನೆ ಹಾಳು ಮಾಡುವ ಪಾತ್ರ. ಆದರೆ ಆ ನಟಿಗೆ ಕೊಟ್ಟಿದ್ದು ಮಾತ್ರ 'ಹಾಸ್ಯಕಲಾವಿದೆ' ಎಂಬ ಬಿರುದು. ಇದು ನಡೆದಿದ್ದು 'ಝೀ ಕುಟುಂಬ ಅವಾರ್ಡ್' ಕಾರ್ಯಕ್ರಮದಲ್ಲಿ. ನಟಿಯೊಬ್ಬಳು ಧಾರಾವಾಹಿಯೊಂದರಲ್ಲಿ ಖಳನಾಯಕಿ ಪಾತ್ರ ಮಾಡುತ್ತಿದ್ದಾರೆ. ಆದರೆ, ಅವಾರ್ಡ್ ಕಾರ್ಯಕ್ರಮದಲ್ಲಿ ಆಕೆಗೆ ಸಿಕ್ಕಿದ್ದು ಮಾತ್ರ ಹಾಸ್ಯನಾಯಕಿ ಪ್ರಶಸ್ತಿ. ಆಕೆಗೆ ಪಾತ್ರಕ್ಕೆ ತಕ್ಕಂತೆ ಖಳನಾಯಕಿ ಬಿರುದು ಕೊಟ್ಟಿದ್ದಾರೆ ಅದಕ್ಕೆ ಒಂದು ಅರ್ಥವಿರುತ್ತಿತ್ತು.

ಅವಳು ಆ ಮನೆಗೆ ಚಿಕ್ಕಮ್ಮ, ಮನೆಯಲ್ಲಿ ಏನು ಕೊರತೆ ಇಲ್ಲದೆ ರಾಣಿ ಹಾಗೆ ಇರಬಹುದಿತ್ತು. ಮನೆಯ ಇತರ ಸದಸ್ಯರು ಇವಳ ಯಾವೊಂದು ಕಾರ್ಯಕ್ಕೂ ಅಡ್ಡಿಪಡಿಸುವವರಲ್ಲ. ಪರಿಸ್ಥಿತಿ ಹಾಗಿರುವಾಗ ಅವರ ಸಂತೋಷದಿಂದ ಯಾವ ಕಾರ್ಯ ಕೈಗೊಂಡರೂ ಮುಖಮೂತಿ ಸೊಟ್ಟ ಮಾಡಿ ತನ್ನ ಕೆಟ್ಟ ಬುದ್ಧಿ ತೋರಿಸುವುದು ಇವಳ ಧೂರ್ತ ಲಕ್ಷಣ. ಅವಳು ಉತ್ತಮ ನಟಿಯಿರಬಹುದು. ಆದರೆ ಅವಳ ಹಾವಭಾವ ಸಹಿಸಲು ಅಸಾಧ್ಯ. ಅಂದಮೇಲೆ ಹಾಸ್ಯ ಪ್ರಶಸ್ತಿ ಬಾಲಿಶ ಅನ್ನಿಸುವುದಿಲ್ಲವೆ?

—ಎನ್.ಎಸ್. ಚಂದ್ರಶೇಖರ್ ಬೆಂಗಳೂರು

## ನೀಚತನ

'ಝೀ ಕನ್ನಡ' ವಾಹಿನಿಯ 'ಸುಬ್ಬಲಕ್ಷ್ಮಿ ಸಂಸಾರ' ಧಾರಾವಾಹಿಯು ಏಕೋ ಇತ್ತೀಚೆಗೆ ಹಳಿ ತಪ್ಪಿದ ಗಾಡಿಯಂತೆ ಸಾಗುತ್ತಿದೆ. ಒಮ್ಮೆ ಮೋಸ ಹೋದ ಸುಬ್ಬಲಕ್ಷ್ಮಿ ಮತ್ತೆ ಗುರುಮೂರ್ತಿಯ ಮಾತಿಗೆ ಮರುಳಾದದ್ದು ವಿಪರ್ಯಾಸ. ಆದರೂ ಇಷ್ಟೆಲ್ಲಾ ಕಪಟತನ ನಡೆಯುತ್ತಿದ್ದರೂ, ಗುರುಮೂರ್ತಿಯ ತಂದೆ–ತಾಯಿ ಬಾಯಿ ಮುಚ್ಚಿಕೊಂಡು ಮಗನ ಮೋಸತನವನ್ನು ನೋಡುತ್ತ ಕುಳಿತಿರುವುದು ಅಚ್ಚರಿ.

ಸೊಸೆ ಸುಬ್ಬಲಕ್ಷ್ಮಿಯ ಜೊತೆ ಇದ್ದು ಮಗನಿಗೆ ಬುದ್ಧಿ ಕಲಿಸುವುದು ಬಿಟ್ಟು, ಅವಳನ್ನು ಏಕಾಂಗಿಯಾಗಿ ಮಾಡಿದ್ದಾರೆ. ದುಡ್ಡಿಗಾಗಿ ಅವಳು ಪರದಾಡುವುದು ನೋಡಿದರೆ, ಅವರದೂ ಒಂದು ಅರ್ಥದಲ್ಲಿ ನೀಚತನ ಅನಿಸುತ್ತದೆ.

—ಸುಚಿತ್ರಾ ಶ್ರೀಕಾಂತ, ನರಸಾಪುರ

## ಅಪೂರ್ವಳ ಅಚ್ಚಳಿಯದ ಅಭಿನಯ

'ಜೊತೆ ಜೊತೆಯಲ್ಲಿ' ಸುಬ್ಬು ಧರ್ಮಪತ್ನಿಯಾಗಿ ನಟಿಸುತ್ತಿರುವ ಅಪೂರ್ವ (ಪುಷ್ಪ) ಅಭಿನಯ ಅಚ್ಚಳಿಯದಂತಿದೆ. ಇನ್ನುಳಿದಂತೆ ಆರ್ಯವರ್ಧನ ನಟ ವಿಷ್ಣು ನೆನಪಿಸುತ್ತದೆ. ಈತನ ಭಂಟ ವಿಲನ್ ಚಹರೆ ಹೊಂದಿರುವುದು ವಿಶೇಷ. ಒಟ್ಟಾರೆ ಎಲ್ಲ ಪಾತ್ರಧಾರಿಗಳ ಅಭಿನಯ ಚೆನ್ನಾಗಿ ಮೂಡಿ ಬರುತ್ತಿದೆ.

—ಎಸ್.ಎನ್. ಮಹಾಬಲರಾವ್,
ನರಸಿಂಹರಾಜಪುರ

## ಮೈತ್ರಿ ಮಹಾನಂದ ಸಾಧನೆ

ಕಲರ್ಸ್ ಸೂಪರ್‌ನಲ್ಲಿ ಪ್ರಸಾರವಾಗುವ 'ಮಗಳು ಜಾನಕಿ' ಧಾರಾವಾಹಿಯ ಎಸ್. ಪಿ. ಮೈತ್ರಿ ಮಹಾನಂದ ಇವರ ಸಾಧನೆ ಪ್ರಶಂಸಾರ್ಹ. ಆದರೆ ಅವರನ್ನು ಅಪಹರಿಸಿದ (ಮೈತ್ರಿ ತಾವಾಗಿಯೇ ಅಪಹರಣ ಆದಂತೆ ನಟಿಸಿ) ನಂತರ ಆದ ಘಟನೆಗಳು ಎಲ್ಲಾ ಬಾಯಿ ಮಾತಿನಲ್ಲಿ ಮುಗಿಸಿಬಿಟ್ಟರು.

ಅವರು ಮಾಡಿದ ಕಾರ್ಯಾಚರಣೆಯನ್ನು ಒಂದೆರಡು ದೃಶ್ಯಗಳಲ್ಲಿ ತೋರಿಸಬಹುದಿತ್ತು. ಆದರೆ, ಧಾರಾವಾಹಿಯಲ್ಲಿ ಆಗುತ್ತಿರುವುದು ಸಂಚಿಕೆಗಟ್ಟಲೆ ಕಾಲಾಹರಣ. ಗೌತಮ್ – ಸಂಜನಾ ಕೇಸ್ ಏನಾಯಿತು? ಕೋರ್ಟ್ ದೃಶ್ಯಗಳು ಮಾಯವಾಗಿದೆ. ಒಟ್ಟಾರೆ ಟಿಆರ್‌ಪಿ ರ ಕೈಹಿಡಿತದಿಂದ ಜಾರುವುದು ಬೇಡ.

—ಅರುಣ್ ಕೆ ಎನ್, ಬೆಂಗಳೂರು

ವಾರದ ಪತ್ರ

## ವೈವಿಧ್ಯತೆಯ ಚಂದನ

ಚಂದನ ವಾಹಿನಿಯಲ್ಲಿ 'ನೆಲದ ಸಿರಿ'ಯಲ್ಲಿ ಸಾಹಿತಿ ಸಾಹಿತಿ ಎಂ.ಕೆ. ಇಂದಿರಾ ಅವರ ಜೀವನದ ಕಥೆಯ ಪರಿಚಯವಿತ್ತು. ಈ ಮಹಾನ್ ಮಹಿಳೆಯ ಬಗ್ಗೆ ಸಾಕಷ್ಟು ಓದಿದ್ದೀವಿ, ಕೇಳಿದ್ದೀವಿ ನಿಜ, ಆದರೂ ಈ ತಾಯಿ ಬರೆದ ಅನೇಕ ಕಾದಂಬರಿಗಳ ಬಗ್ಗೆ ಅನೇಕ ಸಾಹಿತಿಗಳ ಪ್ರಶಂಸೆ ಕೇಳಿ ನನಗೂ ಖುಷಿಯಾಯಿತು.

ತೀರ್ಥಹಳ್ಳಿ ತಾಲ್ಲೂಕಿನ ಮಂಡಗದ್ದೆಯ ಪ್ರತಿಭೆ. ಮಹಿಳೆಯ ಬಗ್ಗೆ ಇದ್ದ ಅವರ ಕಳಕಳಿ, ಇಟ್ಟ ದಿಟ್ಟ ಹೆಜ್ಜೆ ಎಲ್ಲವೂ ಅಲ್ಲಿ ಪ್ರತಿಬಿಂಬಿತವಾಯಿತು. ಅವರ 'ತುಂಗ ಭದ್ರಾ', ಅದರಂತೆ 'ಫಣಿಯಮ್ಮ' ಮತ್ತು 'ಸದಾನಂದ' ಸ್ಮರಣೀಯ. ಇನ್ನೂ ಕೆಲವು ಚಲನಚಿತ್ರಗಳಾಗಿ ಪ್ರಸಿದ್ಧಿ ಪಡೆದಿವೆ.

ಚಂದನ ಒಳ್ಳೆಯ ಕಾರ್ಯಕ್ರಮ ನೀಡುತ್ತಿದೆ. ಶುಭೋದಯ, ರವಿವಾರದ ರಂಗೋಲಿ, ಸಂಗಾತಿ ಸಂಪ್ರೀತಿ, ಥಟ್ ಅಂತ ಹೇಳಿ ಹೀಗೆ ವೈವಿಧ್ಯತೆಯಿಂದ ಕೂಡಿವೆ.

—ಮೇಘನಾ ಜಹಗೀರದಾರ, ಧಾರವಾಡ

## ಕಿರಿಕಿರಿಗೆ ಮುಕ್ತಿ ಇಲ್ಲವೇ?

'ಬಿಗ್ ಬಾಸ್'ನ ಏಳನೇ ಆವೃತ್ತಿಯ ಪ್ರಯಾಣ ಸಾಗುತ್ತಿದೆ. 53 ದಿನಗಳು ಮುಗಿದಿವೆ. ಕೆಲವು ಪ್ರತಿಸ್ಪರ್ಧಿಗಳು ತಮ್ಮ ಪ್ರಯಾಣ ಮುಗಿಸಿದ್ದಾರೆ. ಪ್ರತಿ ಸ್ಪರ್ಧಿಗಳನ್ನು ಹೊರಗೆ ಕಳುಹಿಸುವುದು ಯಾವ ಅಳತೆಗೋಲಿನ ಮೇಲೆ ಎಂದು ಅರ್ಥವಾಗುತ್ತಿಲ್ಲ. ಪ್ರತಿಯೊಂದು ಆವೃತ್ತಿಯಲ್ಲೂ ಪ್ರಥಮ್, ಹುಚ್ಚ ವೆಂಕಟ್, ಆ್ಯಂಡಿಯಂತಹ ಕಿರಿ ಕಿರಿ ಮಾಡುವವರು ಇರುತ್ತಾರೆ.

ಈ ಬಾರಿ ಚೈತ್ರ ಕೋಟೂರ್ ಎಲ್ಲರನ್ನು ಕಿರಿಕಿರಿಗೊಳಿಸುತ್ತ ತಾನೇ ಸರಿ ಎಂಬಂತೆ ಬೀಗುತ್ತಾರೆ. ಒಮ್ಮೆ ಹೊರ ಬಂದು ಮತ್ತೆ ಬಿಗ್ ಬಾಸ್ ಮನೆ ಹೊಕ್ಕಿರುವ ಈಕೆಗೆ ಇರುವ ಅರ್ಹತೆ ಏನು? ಇಂತಹವರನ್ನು ಮತ್ತೆ ಸೇರಿಸಿಕೊಳ್ಳುವ ಔಚಿತ್ಯವಾದರೂ ಏನಿತ್ತು? ಅಂತಹವರಿಲ್ಲದೆ ಬಿಗ್ ಬಾಸ್ ಪಯಣ ಸಾಗದೇ? ಎನ್ನುವ ಪ್ರಶ್ನೆ ಮೂಡುತ್ತದೆ.

—ಎಸ್. ವಿಜಯ ಕುಮಾರಿ, ಬೆಂಗಳೂರು

## ನಿರುತ್ಸಾಹ ಕಥೆ

ಕಲರ್ಸ್ ಸೂಪರ್‌ನಲ್ಲಿ 'ಮಜಾಟಾಕೀಸ್' ಮುಕ್ತಾಯಗೊಂಡ ನಂತರ 'ಇವಳು ಸುಜಾತ' ನೋಡಲು ಉತ್ಸುಕಳಾಗಿದ್ದೆ. ಹೊಸತನವಿಲ್ಲದ ಧಾರಾವಾಹಿಗಳಿಂದ ಬೇಸತ್ತಿದ್ದ ಮನಸ್ಸಿಗೆ ಒಂದಾದರೂ ಒಳ್ಳೆಯ ಧಾರಾವಾಹಿ ಇದೆ ಅನಿಸಿತ್ತು. ಆದರೆ ಇದೂ ಸಹ ಇತರ ಧಾರಾವಾಹಿಗಳ ಜಾಡು ತುಳಿಯುತ್ತಿದೆ.

ಅಭಯ್ ವಿಷಯದಲ್ಲಿ ಅವನ ತಪ್ಪನ್ನು ನಿರ್ದಾಕ್ಷಿಣ್ಯವಾಗಿ ಎತ್ತಿ ತೋರಿಸುತ್ತಾ ಬಾಸಿಸಂ ಮಾಡುತ್ತಿದ್ದ ಸುಜಾತ ಅವಳ ಅತ್ತಿಗೆ ಹಾಗೂ ಅವಳ ಮಗಳ ವಿಷಯದಲ್ಲಿ ಮಾತ್ರ ಸುಮ್ಮನೆ ಇರುವುದು ಅವಳ ಒಳ್ಳೆಯತನ ಎನಿಸುವುದಿಲ್ಲ. ಬದಲಿಗೆ ದಡ್ಡಿ ಪೆದ್ದಿ ಅನಿಸುತ್ತದೆ. ಅವಳ ಪಾತ್ರದ ಬೆಳವಣಿಗೆ ನಿರ್ದೇಶಕರಿಂದಲೇ ಕುಂಠಿತವಾಗುತ್ತಿರುವುದು ಸ್ಪಷ್ಟವಾಗಿದೆ.

—ಎಸ್. ಚಂದ್ರಕಾಂತಾ ಬೆಂಗಳೂರು